**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 346/2014**

**ಸಾಕ್ಷಿಗೆ ದಿನಾಂಕ 24.7.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜಮ್ಮ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ರಾಮಯ್ಯ | ಸಿ.ಡಬ್ಲ್ಯೂ-7 |
| ವಯಸ್ಸು | : | 64 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಅಣ್ಣೂರು ಹೊಸಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುತ್ತದೆ. ಅವರು ಹೆಚ್.ಡಿ.ಕೋಟೆಯ ಲ್ಯಾಂಪ್ ಸೊಸೈಟಿಯಲ್ಲಿ ಗುಮಾಸ್ತರಾಗಿದ್ದರು. ಈಗ ಸುಮಾರು 10 ವರ್ಷದ ಹಿಂದೆ ನಾನು ಸದರಿ ಸೊಸೈಟಿಯ ನಿರ್ದೇಶಕಳಾಗಿದ್ದೆ. ಸದರಿ ಸೊಸೈಟಿಯಲ್ಲಿ ಗೊಂದು, ಜೇನು, ಮರದ ಪಾಚಿಯನ್ನು ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿತ್ತು. ನಾನು ಸದರಿ ಸೊಸೈಟಿಯ ಮೀಟಿಂಗ್‌ಗೆ ಮಾತ್ರ ಹಾಜರಾಗುತ್ತಿದ್ದು ಅದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಗೊಂದ, ಜೇನು ಮತ್ತು ಮರದ ಪಾಚಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾನೆ ಎಂದು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ ಎಪಿಪಿ ರವರಿಂದಃ**

ನಾನು 2001 ರಿಂದ 2005 ರವರೆಗೆ ಹೆಚ್.ಡಿ.ಕೋಟೆಯ ಲ್ಯಾಂಪ್ ಸೊಸೈಟಿಯಲ್ಲಿ ನಿರ್ದೇಶಕಳಾಗಿ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ನಾನು ನಿರ್ದೇಶಕಳಾಗಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ಸೊಸೈಟಿಯಲ್ಲಿ ಸಂಗ್ರಹಿಸಿದ್ದ ಗೊಂದು,

ಜೇನು, ಮರದ ಪಾಚಿಯನ್ನು ನಮ್ಮ ಸಂಘದ ಗಮನಕ್ಕೆ ತರದೇ ದಾಖಲಾತಿಯಲ್ಲಿ ನಮೂದಿಸದೇ

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 346/2014**

**ಸಾಕ್ಷಿಗೆ ದಿನಾಂಕ 24.7.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜಮ್ಮ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ರಾಮಯ್ಯ | ಸಿ.ಡಬ್ಲ್ಯೂ-7 |
| ವಯಸ್ಸು | : | 64 | |
| ಉದ್ಯೋಗ | : | ಕೂಲಿ | |
| ವಾಸಸ್ಥಳ | : | ಅಣ್ಣೂರು ಹೊಸಳ್ಳಿ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯವಿರುತ್ತದೆ. ಅವರು ಹೆಚ್.ಡಿ.ಕೋಟೆಯ ಲ್ಯಾಂಪ್ ಸೊಸೈಟಿಯಲ್ಲಿ ಗುಮಾಸ್ತರಾಗಿದ್ದರು. ಈಗ ಸುಮಾರು 10 ವರ್ಷದ ಹಿಂದೆ ನಾನು ಸದರಿ ಸೊಸೈಟಿಯ ನಿರ್ದೇಶಕಳಾಗಿದ್ದೆ. ಸದರಿ ಸೊಸೈಟಿಯಲ್ಲಿ ಗೊಂದು, ಜೇನು, ಮರದ ಪಾಚಿಯನ್ನು ಸಂಗ್ರಹಿಸಿ ಮಾರಾಟ ಮಾಡಲಾಗುತ್ತಿತ್ತು. ನಾನು ಸದರಿ ಸೊಸೈಟಿಯ ಮೀಟಿಂಗ್‌ಗೆ ಮಾತ್ರ ಹಾಜರಾಗುತ್ತಿದ್ದು ಅದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿಯು ಗೊಂದ, ಜೇನು ಮತ್ತು ಮರದ ಪಾಚಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾನೆ ಎಂದು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ ಎಪಿಪಿ ರವರಿಂದಃ**

ನಾನು 2001 ರಿಂದ 2005 ರವರೆಗೆ ಹೆಚ್.ಡಿ.ಕೋಟೆಯ ಲ್ಯಾಂಪ್ ಸೊಸೈಟಿಯಲ್ಲಿ ನಿರ್ದೇಶಕಳಾಗಿ ಕೆಲಸ ಮಾಡಿರುತ್ತೇನೆ ಎಂದರೆ ಸರಿ. ನಾನು ನಿರ್ದೇಶಕಳಾಗಿದ್ದಾಗ

ನ್ಯಾಯಾಲಯದ ಮುಂದಿರುವ ಆರೋಪಿಯು ಸದರಿ ಸೊಸೈಟಿಯಲ್ಲಿ ಸಂಗ್ರಹಿಸಿದ್ದ ಗೊಂದು, ಜೇನು, ಮರದ ಪಾಚಿಯನ್ನು ನಮ್ಮ ಸಂಘದ ಗಮನಕ್ಕೆ ತರದೇ ದಾಖಲಾತಿಯಲ್ಲಿ ನಮೂದಿಸದೇ ಕಡಿಮೆ ಬೆಲೆಗೆ ಮಾರಾಟ ಮಾಡಿ 2003-04 ನೇ ಸಾಲಿನಲ್ಲಿ 14,712/- ರೂಗಳನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ2 ಎಂದು ಗುರುತಿಸಲಾಯಿತು. ನಾನು ನಿಪಿ2 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಯು ಸದರಿ ಸೊಸೈಟಿಯಲ್ಲಿ ಗುಮಾಸ್ತನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಿಪಿ2 ರ ಅಂಶಗಳನ್ನು ಅಲ್ಲಗಳೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ ಕಡಿಮೆ ಬೆಲೆಗೆ ಮಾರಾಟ ಮಾಡಿ

2003-04 ನೇ ಸಾಲಿನಲ್ಲಿ 14,712/- ರೂಗಳನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ2 ಎಂದು ಗುರುತಿಸಲಾಯಿತು. ನಾನು ನಿಪಿ2 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಯು ಸದರಿ ಸೊಸೈಟಿಯಲ್ಲಿ ಗುಮಾಸ್ತನಾಗಿದ್ದರಿಂದ ಅವರಿಗೆ ಸಹಾಯ ಮಾಡಲು ನಿಪಿ2 ರ ಅಂಶಗಳನ್ನು ಅಲ್ಲಗಳೆದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ